ದಿನಾಂಕ 09-03-2020 ರಂದು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ವಿ ವಿ ಆರ್ ವಕೀಲರಿಂದಃ

ಪಿಲ್ಲನಾರಾಯಣಪ್ಪನನ್ನು ನಾನು ನೋಡಿಲ್ಲ. ಪಿಲ್ಲನಾರಾಯಣಪ್ಪನಿಗೆ ಲಕ್ಷ್ಮಿದೇವಮ್ಮ ಚನ್ನಪ್ಪ ಮತ್ತು ಆಂಜನಮ್ಮ ಮೂರು ಜನ ಮಕ್ಕಳು. ಚನ್ನಪ್ಪನ ಮಕ್ಕಳು ಮತ್ತು ಲಕ್ಷ್ಮೀದೇವಮ್ಮ ಮತ್ತು ಆಂಜನಮ್ಮ ದಾವಾ ಅಸ್ತಿಯ ಮೇಲೆ ಮುನಿಯಪ್ಪನ ಮಕ್ಕಳ ಮೇಲೆ ದಾವಾ ಹಾಕಿರುತ್ತಾರೆ. ದಾವೆಯನ್ನು ಭಾಗಕ್ಕೆ ಹಾಕಿರುತ್ತಾರೆ. ನಾನು ವಾರಕ್ಕೆ ಮೂರು ಬಾರಿ ಚಿಂತಾಮಣಿ ನ್ಯಾಯಾಲಯಕ್ಕೆ ಬರುತ್ತಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿರುದ್ದ ಯಾವುದೇ ಕೇಸು ಇಲ್ಲ. ನನ್ನ ಮೇಲೆ ಕ್ರಿಮಿನಲ್ ಮೊಕದ್ದಮೆ ಇದೆ ಎಂದರೆ ಸರಿಯಲ್ಲ. ಮುನಿಯಪ್ಪ ಸುಮಾರು 18 ವರ್ಷಗಳ ಹಿಂದೆ ಚೆನ್ನಪ್ಪನಿಂದ ಅಸ್ತಿಯನ್ನು ಖರೀದಿಸಿದ್ದಾರೆ ಎಂದು ಹೇಳಿದ್ದು ನಾನು ಉಪ ನೊಂದಣಿ ಕಛೇರಿಗೆ ಹೋಗಿಲ್ಲ ಆದರೆ ವಿಚಾರ ಗೊತ್ತು ಎಂದು ಹೇಳುತ್ತಾರೆ. ಚನ್ನಪ್ಪ ಮತ್ತು ಮುನಿಯಪ್ಪ ನನ್ನ ಮನೆ ಪಕ್ಕದಲ್ಲಿ ಇರುವ ಕಾರಣ ಗೊತ್ತು ಎಂದು ನುಡಿಯುತ್ತಾರೆ.

ಚೆನ್ನಪ್ಪ ಯಾವುದೇ ಮಾರಾಟ ಪತ್ರ ಮಾಡಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಹಣಿಗಳನ್ನು ನೋಡಿ ಮುನಿಯಪ್ಪನವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದು ಹೇಳುತ್ತೇನೆ. ನಾನು 2018-19 ರ ಪಹಣಿಗಳನ್ನು ನೋಡಿ ಸ್ವಾಧೀನ ಇರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಕೋಳಿ ಫಾರಂ ಇದೆ ಎಂದು ನುಡಿಯುತ್ತಾರೆ. 2018-19 ರ ಪಹಣಿಗಳಲ್ಲಿ ಅವರ

ಹೆಸರು ಬರುತ್ತಿಲ್ಲ ಅದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುನಿಯಪ್ಪ ಯಾವುದೇ ಕೋಳಿ ಫಾರಂ ಹಾಕಿಲ್ಲ ಅದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುನಿಯಪ್ಪನಿಗೂ ನನಗೆ ವಿಶ್ವಾಸ ಸರಿಯಿಲ್ಲ. ನ್ಯಾಯಾಲಯಕ್ಕೆ ನನ್ನನ್ನು ಮುನಿಯಪ್ಪನ ಮಗ ಲೋಕೇಶ ಕರೆದುಕೊಂಡು ಬಂ ದಿರುತ್ತಾರೆ. ನನಗೆ ಪಿಲ್ಲನಾರಾಯಣಪ್ಪನ ಕುಟುಂಬವನ್ನು ಮತ್ತು ವಾದಿಗಳನ್ನು ಕಂಡರೆ ನನಗೆ ಆಗುವುದಿಲ್ಲ ಆದ್ದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯ್ಲ್ಲಲ. ಚೆನ್ನಪ್ಪನು ಮುನಿಯಪ್ಪನ ಮೇಲೆ ಇದೇ ಸ್ವತ್ತಿ ಮೇಲೆ ಹಾಕಿರುವ ಅಪೀಲು ಇರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಚನ್ನಪ್ಪನ ಸ್ವಯಾರ್ಜಿತ ಸ್ವತ್ತು ಅಲ್ಲ ಒಟ್ಟು ಕುಟುಂಬದ ಆಸ್ತಿ ಆದ್ದರಿಂದ ಚನ್ನಪ್ಪನಿಗೆ ಮಾರಾಟ ಮಾಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

(ಶ್ರೀ.ಶಿವಕುಮಾರ ಜಿ.ಜೆ)
ಅಪರ ಸಿ.ನ್ಯಾ. ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.